ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 521/2024**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಕೆ ಕುಮಾರ್ | ಸಿ.ಡಬ್ಲ್ಯೂ-**6** |
| ತಂದೆಯ ಹೆಸರು | ಃ ಕೃಷ್ಣಮೂರ್ತಿ | ಪಿ.ಡಬ್ಲ್ಯೂ-**1** |
| ವಯಸ್ಸು | ಃ **52** ವರ್ಷ | |
| ಉದ್ಯೋಗ | ಃ ಅಬಕಾರಿ ನಿರೀಕ್ಷಕರು, | |
| ವಾಸಸ್ಥಳ | ಃ ಮಂಡ್ಯ | |

ದಿನಾಂಕಃ **25.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ನಾನು ದಿನಾಂಕಃ 06.02.2024 ರಿಂದ 10.06.2024 ವರೆಗೆ ನ.ರಾ.ಪುರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29.03.2024 ರಂದು ಕಡತವನ್ನು ಚಾಸಾ-1 ರವರಿಂದ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ ದಿನಾಂಕಃ 02.04.2024 ರಂದು ವಾಹನದ ಮಾಲೀಕರಿಂದ ಜಾಮೀನು ಪಡೆದುಕೊಂಡ ಪ್ರತಿಯನ್ನು ಪಡೆದಿರುತ್ತೇನೆ. ದಿನಾಂಕಃ 05.04.2024 ರಂದು ಹೋಮ್ನೀ ವ್ಯಾನ್ ಕೆಎ-18-ಝಡ್-1931 ರ ಬಿ ಎಕ್ಸ್ ಟ್ರ್ಯಾಕ್ಟ್ ನ್ನು ಕೇಳಿ ಪ್ರಾದೇಶಿಕ ಅಧಿಕಾರಿಗಳು, ಚಿಕ್ಕಮಗಳೂರು ರವರಿಗೆ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕಃ 06.04.2024 ರಂದು ಸದರಿಯವರಿಂದ ಬಿ ಎಕ್ಸ್ ಟ್ರ್ಯಾಕ್ಟ್ ಪಡೆದಿರುತ್ತೇನೆ. ಸಾಕ್ಷಿ ಬಿ ಎಕ್ಸ್ ಟ್ರಾಕ್ಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿನಾಂಕಃ 12.04.2024 ರಂದು ವಾಹನ ಮಾಲೀಕರಾದ ಜಗದೀಶ್ ರವರಿಗೆ ನೋಟೀಸು ನೀಡಿದ್ದು ಅವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು

ಗುರುತಿಸಲಾಯಿತು. ದಿನಾಂಕಃ 15.04.2024 ರಂದು ಅಬಕಾರಿ ಉಪ ಆಯುಕ್ತರು ಚಿಕ್ಕಮಗಳೂರು ಇವರ ಆದೇಶದಂತೆ ಬ್ಯಾಂಕ್ ಗ್ಯಾರಂಟಿ ಆಧಾರದ ಮೇಲೆ ಜಪ್ತು ಮಾಡಿಕೊಂಡ ವಾಹನವನ್ನು ಜಗದೀಶ್ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 03.05.2024 ರಂದು ಪ್ರಕರಣದಲ್ಲಿ ಮಾದರಿ ತೆಗೆದ ಮದ್ಯವನ್ನು ರಾಸಾಯಕ ತಜ್ಞರು ಬೆಂಗಳೂರು ಅಂದರೆ ಚಾಸಾ-5 ರವರಿಗೆ ಭರತ್ ಕುಮಾರ್ ಅಂದರೆ ಚಾಸಾ-2 ರವರ ಮೂಲಕ ಕಳುಹಿಸಿರುತ್ತೇನೆ. ಸಾಕ್ಷಿ ಚಾಸಾ-5 ರವರಿಗೆ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಿನಾಂಕಃ 06.05.2024 ರಂದು ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 10.06.2024 ರಂದು ಚಾಸಾ-7 ರವರಿಗೆ ಕಡತವನ್ನು ಮುಂದಿನ ತನಿಖೆಗಾಗಿ ವರ್ಗಾಯಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಜಿ ಡಿ ವಕೀಲರಿಂದ ಃ</u>

ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಾದರಿಗಾಗಿ ಸ್ಯಾಂಪಲ್ ಗಳನ್ನು ಸೃಷ್ಟಿ ಮಾಡಿ ಕಳುಹಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**ಪ್ರ.ದ.ನ್ಯಾದಂಃ ನ.ರಾ.ಪುರ.**

ಸಾಕ್ಷಿ ಸಹಿಃ